ಆಲದ ಮರ ಒಂದು ತರ ನನ್ನನ್ನು ಕಾಡತೊಡಗಿತ್ತು.

ಹೀಗಿರಲು ಒಂದು ದಿನ ನಮ್ಮ ತಾಯಿ ಚಾವಡಿಯಲ್ಲಿ ಅಕ್ಕಿ ಕೇರುತ್ತಾ ಕುಳಿತಿದ್ದಾಗ ನಾನು ಪಕ್ಕದಲ್ಲಿ ಕುಳಿತು ನಲ್ಲು ಹೆರಕುತ್ತಾ 'ಅಮ್ಮಾ ಈ ಕಡೆ ಯಾಕೆ ಆಲದ ಮರ ಇಲ್ವಲ್ಲ?' ಅಂತ ಕೇಳಿದೆ. 'ಈ ಕಡೆ ಇಲ್ಲ ಅಂತೇನಿಲ್ಲ ಕನಪ. ಕಮ್ಮಿ. ಮಳಿ ಜಾಸ್ತಿ ಸುರಿತದಲಾ ಅದಕಾ ಏನಾ? ಯಾರಿಗ್ಗೊತ್ತು. ಬೇಲೂರು, ಹಳೇಬೀಡು, ಹಾಸನ ಹಿಂಗೆಲ್ಲಾ ಹ್ವಾದ್ರೆ ನೋಡ್ಬೋದು. ಅವೆಲ್ಲಾ ಊರ ಹೊರಗೆ ಕಾಡಲ್ಲಿ ಅಪರೂಪಕ್ಕೆ ಹುಟ್ಟಿ ಬೆಳೆಯ ಮರಗಳು ಕನ. ಚಂದಮಾಮನ ಕಥಿಲಿ ಐತೆ ನೋಡು, ನೀವೆಲ್ಲಾ ಓದಿರಲಾ, ಛಲ ಬಿಡದ ವಿಕ್ರಮನು ಮತ್ತೆ ಆಲದ ಮರದ ಬಳಿಗೆ ಹೋಗಿ ಯಥಾಪ್ರಕಾರ ಶವವನ್ನು ಹೆಗಲ ಮೇಲೆ ಹಾಕಿಕೊಂಡು, ಅಯ್ಯಪ್ಪಾ ಇದೇನಿದು ಹೆಣಭಾರ ಎಂದು ಏದುಸಿರು ಬಿಡುತ್ತಾ ಹೆಜ್ಜೆ ಹಾಕುತ್ತಿರಲು ಶವದೊಳಗಿದ್ದ ಬೇತಾಳವು ತನ್ನ ಮಾಮೂಲಿ ಮಾತನ್ನು ಆರಂಭಿಸಿತು... ಆಮ್ಯಾಲೆ ಒಂದ್ ಕಥಿ ಹೇಳದು, ಕಥಿ ನೀತಿ ಹೇಳು ಇಲ್ಲಾ ಅಂದ್ರೆ ನಿನ್ನತಲಿ ಚೂರು ಚೂರಾಗಿ ಸಿಡಿತದೆ ಅಂತ ಹೆದರ್ಸದು. ರಾಜ ನೀತಿ ಹೇಳಿದ ಮಾಲೆ ನೀನು ಷರತ್ತು ಮುರ್ದಿದ್ದೀಯ, ನಾನು ಹೊರಟೆ ಅಂತ ರಾಜನ ಹೆಗಲಿನಿಂದ ಹಾರಿ ಹೋಗಿ ಮತ್ತೆ ಆಲದ ಮರದ ಕೊಂಬಿಗೆ ತೂಗುಬೀಳದು ಬೇತಾಳ. ಹಂಗಾಗಿ ಎಲ್ಲರೂ ಆಲದ ಮರ ಅಂದ ಕೂಡ್ಲೆ ಹೆದರರು. ಹೆಣ್ಣ್ ಮಕ್ಕಳಂತು ಅತ್ಲಗೋಗಿ ತಲೆ ಹಾಕ್ತಿರಲಿಲ್ಲ. ಸೊಕನಂಗೆ ಆದ್ರೆ ಕಷ್ಟ ಅಂತ. ಸೇದ ಬಾವಿತವಂತೂ ಬರೀ ಆಲದ ಮರದ ಸುದ್ದಿ. ಮನ್ನೆ ರಾತ್ರಿ ಆಲದ ಮರದ್ ತವ ಎಂತದ ಕೂಗ್ತುತ್ತು, ಕಳದ ವಾರ ಕೂಗ್ತು, ನಿನ್ನಿ ಕೂಗ್ತು, ಇವೇ ಮಾತು. ಕಾಲ ಕಳದಂಗೆ ಕಾಡು ಕಡ್ದು ನಾಡು ಆದಾಗ ರೋಡ್ ಆಗಿ ಮನೆ ಮಠ ದೆಸ್ತಾನ ಹಿಂಗೆಲ್ಲಾ ಕಟ್ಟಿದಾಗ ಇನ್ನೇನು ಊರೊಳಗೆ ಇದ್ದಂಗೆ ಆಗ್ತದೆ. ಆಲದ ಮರಗಳ ಸುತ್ತಾ ಕಟ್ಟೆ ಕಟ್ಟಿದು. ಸಾಯಿಂಕಾಲ ದನ ಕೂಡ ಹೊತ್ನಲ್ಲಿ ಊರಿನ ಜನ ಕೂರ್ತರೆ. ನಿಲ್ಲತರೆ. ಪಂಚಾಯ್ತಿ ಊರ್ ರಗಳಿ ಸುದ್ದಿ ಹಿಂಗೆಲ್ಲಾ ಮಾತಾಡ್ತರೆ. ಪಿಚ್ಚರಗೆಲ್ಲಾ ತೋರುಸ್ತರಲಾ ಮೊಗ' ಎಂದು ಹೇಳಿದ ಅಮ್ಮ ಒಂದೆರಡು ನಿಮಿಷ ಸುಮ್ಮನಾಗಿ ಏನೋ ನೆನಪಾದಂತೆ:

'ಆಲದ ಮರಕ್ಕೆ ಸಕತ್ತು ಜಂಭವಂತೆ, ನನ್ನ ಯಾರೂ ಏನು ಮಾಡಕಾಗಕ್ಲ ಅಂತ ಗೋಣಿ ಮರಕ್ಕೆ ಹೇಳ್ತುತ್ತಂತೆ. ಗೋಣಿ ಮರ ಯಾಕೆ ಅಂತ ಕೇಳ್ತಂತೆ. ಅವಾಗ ಆಲದ ಮರ ಹೇಳ್ತದಂತೆ, ನನ್ನ ತುದೀಲಿ ಲಕ್ಷ್ಮೀದೇವಿ ಇದಾಳೆ. ಮಧ್ಯದಾಗೆ ವೀರಭದ್ರ ಸ್ವಾಮಿ ಐತೆ. ಕೊಂಬಿಲಿ ಬೇತಾಳ ತೂಗಾಡ್ತವೆ. ನಿರ್ವಾಣಸ್ವಾಮಿ ಗದ್ದಿ ಹೂಡಿ (ಉಳುಮೆ) ಆರ್ ಬುಟ್ಟು ಎತ್ತಗಳನ್ನ ರಾಗ್ಯಾಣಕ್ಕೆ ಕಟ್ಟಿ ಓಡಿ ಬಂದು ನನ್ನ ಬುಡದಗೆ ತಲೆ ಕೊಟ್ಟಗಂದು ಮಂಗಿ ನಿದ್ದಿ ಮಾಡಿತ್ತು. ಹೆಣ್ಮಕ್ಕಿಗೆ ಮದುವಿ ತಡ ಆದ್ರೆ ನನ್ನ ಜೊತಿ ಮದ್ವಿ ಮಾಡ್ತರೆ. ನನ್ನ ಸುತ್ತಾ ಪ್ರದಕ್ಷಿಣೆ ಹಾಕ್ತಾರೆ. ಅರಿಶಿನ ಕುಂಕುಮ ಇಡ್ಸತರೆ, ಬಿಳಿಕೆಂಪು ದಾರ ನನ್ನ ಸುತ್ತಾ ಕಟ್ತಾರೆ, ಅಡ್ಡಬೀಳ್ತಾರೆ. ಹಕ್ಕಿಪಕ್ಷಿ ನನ್ನ ಹುಡುಕಿಂದು ಬರ್ತವೆ. ಸರ್ಪಗಳಿಗೆ ಮೋಕ್ಷ ಸಿಕ್ಕದೇ ನನ್ನಿಂದ. ಮಳಿ ಬರ್ದೆ ಇದ್ರೂ ನಾನ್ ಹೆದ್ರಕ್ಲ ಅಂತ ಹೇಳದೇ ಹೇಳದಂತೆ. ಗದ್ದಿ ನಟ್ಟಲಿ ಎಲ್ಲಾ ತಲಿಗೊಂದು ಮಾತಾಡದು. ನಗ್ಯಾಡದು ಕೆಲ್ಸ ಸಾಗ್ಬಕಲ ಮೊಗ. ನಮ್ಮ ಅವ್ವ ಮಾತ್ರ ಯಾವಾಗ್ಲೂ ಆಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆ ಇಲ್ಲ, ಜಾಲಿಯ ಮರವು ನೆರಳಲ್ಲ ಮಗಳೇ, ತಾಯಿಯ ಮನೆಯು ಸ್ಥಿರವಲ್ಲ ಅಂತ ಹಾಡೇಳ್ತುತ್ತು'. ಅಮ್ಮ ಮಾತು ಮುಗಿಸಿ, 'ಯಾಕಪಾ ಉರಿ ಬಿಸ್ಲಲಿ ನಿಂಗೆ ಆಲದ ಮರ ಗ್ಯಾನಾಯ್ತು?' ಅಂತ ಕೇಳಿದಾಗ, 'ಏನಿಲ್ಲಮ್ಮಾ, ಸುಮ್ನೆ ಆಲದ ಮರವೇ ಆಲದ ಮರವೇ ಹಾಡು ನೆನಪಾಯ್ತು ಅಷ್ಟೆ' ಅಂದೆ. 'ಓ ನಿಮ್ಮ ಡ್ಯಾನ್ಸು, ಸಣ್ಣ್ ಮಕ್ಕಳಾಗಿದ್ದಾಗ ಮಾಡಿದ್ದು. ಅದು ಮರಿಯಕ್ಲ ಬುಡು' ಅಂತ ಅಮ್ಮ ಹೇಳಿದ್ದು ನನಗೆ ನಿನ್ನೆ ಮೊನ್ನೆ ಕೇಳಿದಂತೆ ನೆನಪಾಗುತ್ತದೆ.

ಅಮ್ಮನ ಮಾತುಗಳನ್ನು ಕೇಳಿದ ಮೇಲೆ ಎರಡು ಪ್ರಶ್ನೆಗಳು ನನ್ನನ್ನು ಕಾಡತೊಡಗಿದವು. ಮೊದಲನೆಯದು, ಆಲಕ್ಕೆ ಹೂವಿಲ್ಲ ಎನ್ನುವುದು. ಎರಡನೆಯದು, ಸರ್ಪಗಳಿಗೆ ಮೋಕ್ಷ ಸಿಗುವುದೇ ಆಲದ ಮರದಿಂದ ಎಂಬ ಮಾತು. ಯಾರನ್ನ ಕೇಳುವುದು? ಆಗ ನೆನಪಾಗಿದ್ದು ನಮ್ಮ ತಂದೆ. ಅವರು ನಮ್ಮ ಸ್ಕೂಲಿನ ಹಳೆಯ ವಿದ್ಯಾರ್ಥಿ. ಮೂಡಿಗೆರೆಯ ಜೂನಿಯರ್ ಕಾಲೇಜಿನಲ್ಲಿ ಓದಿದವರು. ಕಾಡು ಸುತ್ತುವುದು, ಶಿಕಾರಿ ಜೇನು ಹುಡುಕುವುದಲ್ಲದೇ ಪ್ರತಿಯೊಂದು ಮರದ ಹೆಸರನ್ನು ಹೇಳಿ ಆ ಮರದ ಕುರಿತ ವಿವರಣೆ ಹೇಳುತ್ತಿದ್ದರು. ಅವರ ಕೈಗೆ ಪುಸ್ತಕ ಸಿಕ್ಕರೆ ಅದನ್ನು ಪೂರ್ತಿ ಓದದೆ ಕುಳಿತಲ್ಲಿಂದ ಏಳುತ್ತಿರಲಿಲ್ಲ. ಅದೇನೋ ಸರಿ, ಆದರೆ ಅವರನ್ನು ಯಾವಾಗ ಕೇಳುವುದು? ಏನಂತ ಕೇಳುವುದು? ಇದೇ ಯೋಚನೆ ಕೂತರೆ ನಿಂತರೆ. ಇವತ್ತಿನ ಮಕ್ಕಳಿಗಿರುವಷ್ಟು ಧೈರ್ಯ ಅವತ್ತು ನಮಗಿರಲಿಲ್ಲವಲ್ಲ. ಹೀಗೇ ದಿನಗಳು ಕಳೆಯುತ್ತಿದ್ದವು. ಮೇ ತಿಂಗಳು ಬಂತು. ಒಂದು ಭಾನುವಾರ ತಂದೆ ಗದ್ದೆ ಹೂಡಲು ಹೋಗಿದ್ದರು. ಬೆಳಗ್ಗಿನ ಸಮಯ, ಅಮ್ಮ ಸ್ಟೀಲ್ ಚಂಬಿಗೆ ಎರಡು ಲೋಟ ಕಾಫಿ ಹಾಕಿ, 'ಹೋಗಿ ನಿಮ್ಮಣ್ಣಯ್ಯಗೆ ಕೊಟ್ಟು ಬಾ' ಅಂತ ನನ್ನ ಕಳಿಸಿತು.

'ಅರ್ ಅಅರ್ ಅ ಹೋಯ್ ಬಪಬಪಬಪ ಬಪಬಪಬಪ ಅರ್ ಅ ಅರ್ ಅ' ಎನ್ನುತ್ತಾ ಗದ್ದೆ ಉಳುತ್ತಿದ್ದ ಅಪ್ಪ ನನ್ನ ನೋಡಿ ಆರು ನಿಲ್ಲಿಸಿ ಬಂದು, ಗದ್ದೆ ತೆವರಿನ ಮೇಲೆ ಕುಳಿತು ಕಾಫಿ ಕುಡಿಯುತ್ತಿದ್ದಾಗ, ಸಮಯ ಕಾಯುತ್ತಿದ್ದ ನಾನು – 'ಅಣ್ಣಯ್ಯ ನಮ್ಮ ಕಡೆ ಆಲದ ಮರ ಯಾಕಿಲ್ಲ?' ಅಂತ ಕೇಳಿದೆ. 'ಇಲ್ಲ ಅಂತ ಏನಿಲ್ಲ, ಅಪರೂಪ. ಮಳೆ ಜಾಸ್ತಿ ಅಂತ ಇರ್ಬೋದು. ಯಾಕೆ?' ಅಂದ್ರು, 'ಯಾಕು ಇಲ್ಲ, ಸುಮ್ಮನೆ. ಆಲದ ಮರದ ಬಗ್ಗೆ ತಿಳ್ಕನನ ಅಂತ' ಅಂದೆ. 'ಹೌದಾ, ನನಗೂ ಬಹಳ ಗೊತ್ತಿಲ್ಲ. ಎಷ್ಟು ಗೊತ್ತೊ ಅಷ್ಟು ಹೇಳ್ತೀನಿ. ಎಲ್ಲೋ ಓದಿದ್ದು. ಮರಗಳ ಅಧ್ಯಯನ ಶಾಸ್ತ್ರ ಅಂತ ಇದೆಯಲ್ಲ, ಯಾವುದೇಳಪ್ಪ?' ಅಂತ ಕೇಳಿದರು. ನಾನು 'ಡೆಂಟ್ರಾಲಜಿ' ಅಂತ ಹೇಳಿದೆ. 'ಹಾಂ, ಅದು ಹೇಳೋ ಪ್ರಕಾರ, ಔಷಧಿಯುಕ್ತ ಮರಗಳ ಸಂಖ್ಯೆ ಒಟ್ಟು ನೂರಾ ಮೂವತ್ತು. ಅದರಲ್ಲಿ ಆಲದ ಮರವೂ ಒಂದು. ಆಲ ಅಂದರೆ ವಟವೃಕ್ಷ ಅಂತ ಅರ್ಥ. ಹಾಲುಮರಗಳು ಅಂತ ಇರ್ತವೆ. ಹಲಸು, ಹಾಲೆ, ಹೆಬ್ಬಲಸು, ಹಾಲುಸಂಪಿಗೆ, ಹಿಂಗೆ ಅಂತಹ ಹತ್ತಾರು ಮರಗಳಲ್ಲಿ ಆಲ ನಾಲ್ಕನೇ ಸ್ಥಾನದಲ್ಲಿದೆ. ಇದರ ನಡುವೆ ಕರ್ನಾಟಕದಲ್ಲಿ ಪ್ರತ್ಯೇಕವಾಗಿ ಕೃಷಿ ಮಾಡಬಹುದಾದ ಕೆಲವು ಗಿಡಮರಗಳನ್ನ ಶ್ರೀರಂಗನಾಥ ಸಮಿತಿ ಶಿಫಾರಸ್ಸು ಮಾಡಿದೆ, ಆ ಹದಿನೆಂಟು ಔಷಧಿಗೆ ಉಪಯುಕ್ತ ಮರಗಳಲ್ಲಿ ಆಲ ಪ್ರಥಮ ಸ್ಥಾನದಲ್ಲಿದೆ. ಅಶೋಕ ಮಹಾರಾಜ ಸಾಲು ಗಿಡ ನೆಡುವಾಗ ಮೊದಲಿಗೆ ಆಯ್ಕೆ ಮಾಡಿಕೊಂಡದ್ದು ಆಲದ ಗಿಡವನ್ನ. ಅದೇ ರೀತಿ ಟಿಪ್ಪುಸುಲ್ತಾನ್ ದೂರದೃಷ್ಟಿಯಿಂದ ಗಿಡ ನೆಡುವ ಪ್ರಕ್ರಿಯೆ ಕೈಗೊಂಡಾಗ ಮೊದಲು ಆಯ್ಕೆಯಾದ ಹತ್ತು ಗಿಡಗಳಲ್ಲಿ ಇದೂ ಒಂದು. ಇದಕ್ಕೆ ಕಾರಣ, ನೀರಿಲ್ಲದೆ ರೋಗ ರುಜಿನಗಳ ಭಯವಿಲ್ಲದೆ ಬೆಳೆಯುವ, ದೀರ್ಘಕಾಲ ಬಾಳುವ ಮರ ಎನ್ನುವುದು. ಸಾಕಲಪ, ಎತ್ಗಳು ನಿಂತು ಸುಮಾರ್ ಹೊತ್ತಾಯ್ತು. ಪಾಪ ಕಾಲು ಸೋಲ್ತವೆ. ನಡಿಯದು ಬೇರೆ ನಿಲ್ಲದು ಬೇರೆ ಅಲ್ಲವಾ?' ಅಂದರು.

ಸುಮ್ಮನೆ ಕುಳಿತು ಕೇಳುತ್ತಿದ್ದ ನಾನು. 'ಸಾಕು, ಅದೇ ಅಮ್ಮ ಆಲಕ್ಕೆ ಹೂವಿಲ್ಲ ಅಂತ ಹಾಡು ಹೇಳ್ದದಲಾ ಆಮ್ಯಾಲೆ ಹಾವುಗಳಿಗೆ ಅದೇನೋ ಮೋಕ್ಷ ಆಲದ ಮರ ಕೊಡ್ತದೆ ಅಂತ ಹೇಳ್ತಲಾ' ಅಂದೆ. ನಮ್ಮ ತಂದೆ ಜೋರಾಗಿ ನಗಾಡಿ 'ಮೋಕ್ಷನ ಆಲದ ಮರ ಕೊಡದೇನು? ನಿಮ್ಮಮ್ಮನೇ ಕೊಟ್ಟಳೆ ಸುಮಾರು ಹಾವುಗಳಿಗೆ, ಮನ್ನೆ ಹಳ ಕೊಚ್ಚವತಿಗೆ ಹರಚೆಟ್ಟಿ ಹಾವಿಗೆ ಮೋಕ್ಷ ಕೊಟ್ಟಳು. ಅದು ಹಂಗಲ್ಲ, ಹಾವುಗಳಿಗೆ ಮರ ಹತ್ತೋದಕ್ಕೆ ಸಲಿಸಾಗ ಮರ ಅಂದ್ರೆ ಆಲ. ಆಲದ ಗಿಡ ಹತ್ತರಿಂದ ಹದಿನೈದು ಅಡಿ ಬೆಳೆದ ಮೇಲೆ ಎಡಬಲ ಕೊನೆಗಳಿಂದ ಬಿಳಲುಗಳು ಇಳಿ ಬೀಳುತ್ತವೆ. ಅವು ಭೂಮಿಗೆ ತಲುಪುವ ಹೊತ್ತಿಗೆ ಬೇರುಬಿಟ್ಟು ತಳವೂರಿ ನೀರೀರಿ ಮರದ ರೂಪ ತಾಳುತ್ತವೆ. ಒಂದೊಂದು ಬಿಳಲು ಒಂದೊಂದು ಮರ. ಕೆಲವು ಮರಗಳ ರಚನೆ ಹಾವಿಗೆ ಹತ್ತಕೆ ಸಹಾಯ ಮಾಡ್ತದೆ. ಇಳಿಯಕಾಗ್ದೆ ಆಹಾರವೂ ಸಿಗದೆ ತೀರಿ ಹೋಗಿರಲೂಬಹುದು. ಇದೆಲ್ಲಾ ಅಪರೂಪಕ್ಕೆ ನಡೆಯುವಂತದ್ದು. ಇನ್ನು ಆಲದ ಹೂ ಅಂದ್ರೆ ಹೂವ ಉಂಟೇಉಂಟು. ಚಿಗುರಿನ ಬಣ್ಣ. ಸಣ್ಣಸಣ್ಣ ಎಲೆ ಇದ್ದಂಗೆ ಇರ್ತವೆ. ಯಾರಿಗೂ ನೋಡಕೆ ಸಿಕ್ಕಕ್ಲ. ಹಿಂದೆನೆ ಮಿಡಿಯಾಗಿ ಕಾಯಿಗಟ್ಟವೆ. ಅಂಟುವಾಳ ಕಾಯಿ ನೋಡ್ದಂಗೆ ಆಗ್ತವೆ. ಹಣ್ಣಾಗಕೆ ಬುಡಕೆ ಇಲ್ಲ. ಅಳಿಲು ಹಕ್ಕಿಗಳು ಕೆಲವು ಗಾಳಿಗೆ ಉದುರ್ತವೆ. ಕಾಡಲ್ಲಾದ್ರೆ ಕಾಡುಕುರಿ ಕಾಡಂದಿ ಕಬ್ಬೆಕ್ಕು ಮುಸಿಯ ಇಂತವೆಲ್ಲ ತಿನ್ನವೆ. ಇವೆಲ್ಲಾ ವಿಜ್ಞಾನಿಗಳಿಗಾದ್ರೆ ಚೆನ್ನಾಗಿ ಗೊತ್ತಿರ್ತದೆ. ನಮಗೆಲ್ಲ ಅಲ್ಪಸ್ವಲ್ಪ ಅಷ್ಟೆ. ಸಾಕು ನಡಿನಡಿ ಮನಿಗೋಗು. ನಾನು ಇನ್ನೇನು ಬಂದೆ, ಎತ್ಗಳ ಮೈತ್ವಳದು ನೀರ್ ಕುಡ್ಸಿ ಕಟ್ಟಿ ಬಂದ್ಬುಡ್ತಿನಿ' ಎನ್ನುತ್ತಾ ತಂದೆ ಗದ್ದೆಗಿಳಿದಿದ್ದರು.

ಆಲದ ಮರವೇ ಆಲದ ಮರವೇ ಅಂತ ಹಾಡೇಳಿಕೊಂಡು ಗದ್ದೆಗಣ್ಣೆ ಸುತ್ತುತ್ತಾ ಕಾಲಕಳೆಯುತ್ತಿದ್ದ ನನಗೆ ಅಲ್ಲಿಯ ನೀರಿನ ಋಣ